**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್**

ಸಿ.ಸಿ.ನಂ.2169/2024

ಚಾಸಾ:1 ಪ್ರಾಸಾ:1

ದಿನಾಂಕಃ 03.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿದಾರರ ಹೆಸರು– ಶ್ರೀರಾಮಪ್ಪ

ತಂದೆಯ ಹೆಸರು– ತಿಮ್ಮಪ್ಪ

ವಯಸ್ಸು – 58 ವರ್ಷ

ಉದ್ಯೋಗ– ಕೂಲಿ

ವಾಸ– ತಂಬರಹಳ್ಳಿ

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿ 1 ರಿಂದ 3 ರವರು ನನ್ನ ಮಕ್ಕಳು, 4 ನೇ ಆರೋಪಿ ನನ್ನ ಅಳಿಯ ಮತ್ತು 5 ನೇ ಆರೋಪಿ ನನ್ನ ಪತ್ನಿ. ಚಾಸಾ–2 ರಿಂದ 4 ರವರು ನನಗೆ ಗೊತ್ತು. ನನ್ನ ಮತ್ತು ಆರೋಪಿಗಳ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ. ನನಗೆ ಈಗ ತೋರಿಸುತ್ತಿರುವ ದಾಖಲೆ ಮತ್ತು ಅದರಲ್ಲಿ ನನ್ನ ಹೆಬ್ಬೆಟ್ಟಿನ ಗುರುತನ್ನು ಗುರುತಿಸುತ್ತಿದ್ದೇನೆ. ದಾಖಲೆಯನ್ನು ನಿಪಿ–1 ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿ 5 ರ ನಡುವೆ ಕುಟುಂಬದ ವಿಚಾರವಾಗಿ ಮನಸ್ತಾಪ ಉಂಟಾಗಿ ಭಗೆಹರಿಸಿಕೊಳ್ಳಲು ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ. ನಿಪಿ-1 ರಲ್ಲಿ ಏನು ಬರೆದಿದೆ ಅನ್ನುವುದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಎಂದು ಹೇಳಿ ಸಾಕ್ಷಿಗೆ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿ.01.05.2024 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ನನ್ನೊಂದಿಗೆ ಜಗಳ ಮಾಡಿ ನನ್ನ ಕಣ್ಣಿಗೆ ಏನೋ ಎರಚಿ 1 ನೇ ಆರೋಪಿಯು ದೊಣ್ಣೆಯಿಂದ ನನ್ನ ಬೆನ್ನು, ಬಲ ಬುಜ ಮತ್ತು ಕೈಗಳ ಮೇಲೆ ಹೊಡೆದಿದ್ದು ಎಲ್ಲಾ ಆರೋಪಿಗಳು ನನಗೆ ಕೈ ಗಳಿಂದ ಮತ್ತು ಕಾಲುಗಳಿಂದ ಹೊಡೆದು ಕೆಳಗೆ ತಳ್ಳಿ ಹೆಬ್ಬೆರಳು ಮತ್ತು ಬಲಗೈ ಗೆ ಗಾಯಗಳಾಗಿರುತ್ತವೆ ಅನ್ನುವುದು ಸರಿಯಲ್ಲ. ಈ ಬಗ್ಗೆ ನಾನು ನಿಪಿ-1 ರಂತೆ ದೂರು ನೀಡಿರುತ್ತೇನೆ ಅನ್ನುವುದು ಸರಿಯಲ್ಲ. ಆರೋಪಿಗಳು ನನ್ನ ಸಂಬಂಧಿಕರು ಆಗಿರುವುದರಿಂದ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ದೊಣ್ಣೆಯನ್ನು ಗುರುತಿಸಲು ಆಗುವುದಿಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಕೆ. ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್